ಕುಮಾರಚಲ್ಯ

ಕಲೆ: ಮುರಳೀಧರ ರಾಠೋಡ್

## ರಾಮಾಯಣಕ್ಕೆ ಹೊಸ ಆಯಾಮ

# ನಾಗಚಂದ್ರನ ರಾಮಚಂದ್ರಚರಿತ ಪುರಾಣ

ವಾಲ್ಮೀಕಿ ಸ್ನಾನಕ್ಕಾಗಿ ಗಂಗಾನದಿಯ ಸಮೀಪದ ತಮಸಾನದಿಯ ತೀರಕ್ಕೆ ಶಿಷ್ಯನಾದ ಭಾರದ್ವಾಜನೊಂದಿಗೆ ಬಂದಿದ್ದಾನೆ. ಆಗ ಇಂಪಾಗಿ ಕೂಗುತ್ತಿದ್ದ ಕ್ರೌಂಚಪಕ್ಷಿಗಳ ಜೋಡಿಯನ್ನು ಕಂಡು ಆಕರ್ಷಿತನಾಗಿ ವೀಕ್ಷಿಸುತ್ತಿದ್ದಂತೆಯೇ ಅಲ್ಲಿಗೆ ಬಂದ ಬೇಡನೊಬ್ಬ ಗಂಡು ಪಕ್ಷಿಯನ್ನು ಹೊಡೆದುರುಳಿಸುತ್ತಾನೆ. ಸದಾ ಜೊತೆಗೂಡಿ ಸಂಚರಿಸುತ್ತಿದ್ದು, ಈಗ ರಕ್ತ ಸಿಕ್ತವಾಗಿ ನೆಲದ ಮೇಲೆ ಹೊರಳಾಡುತ್ತಿರುವ ಗಂಡು ಪಕ್ಷಿಯನ್ನು ನೋಡಿ ಹೆಣ್ಣು ಪಕ್ಷಿಯು ಅರಚುತ್ತದೆ. ನಿಷಾದನಿಂದ ಕೊಲ್ಲಲ್ಪಟ್ಟ ಆ ಪಕ್ಷಿಯನ್ನು ನೋಡಿದ ವಾಲ್ಮೀಕಿಗೆ ಕಾರುಣ್ಯ ಉಕ್ಕಿ, ಅಳುತ್ತಿರುವ ಪಕ್ಷಿಯನ್ನು ಕಂಡು, ಈ ಕೃತ್ಯ ಅಧರ್ಮವಾದುದು ಎಂದು ತಿಳಿದು ಹೀಗೆ ನುಡಿಯುತ್ತಾನೆ: